# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1021 |
| ವಿಧಾನ ಸಭೆಯ ಸದಸ್ಯರ ಹೆಸರು | ಡಾ. ತೇಜಸ್ವಿನಿ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.12.2018 |
| ಉತ್ತರಿಸುವ ಸಚಿವರು | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು. |
| ವಿಷಯ | ಮಾಹಿತಿ ತಂತ್ರಜ್ಞಾನ ದುರುಪಯೋಗ ತಡೆ ಬಗ್ಗೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಲ್ಲೆಡೆ ಮಾಹಿತಿ ತಂತ್ರಜ್ಞಾನದ ಸದುಪಯೋಗ ಪಡೆಯಲು ಅಗತ್ಯವಾದ "Tower"ಗಳ ನಿರ್ಮಾಣ ಸಮರ್ಪಕವಾಗಿದೆಯೇ; | ಟೆಲಿಕಾಂ ಕಂಪನಿಗಳು ಹಾಗೂ ಅಂತರ್ಜಾಲ ಸೇವಾದಾರರುಗಳು ರಾಜ್ಯದೆಲ್ಲೆಡೆ ಟವರ್‌ಗಳನ್ನು ಸ್ಥಾಪಿಸಿದ್ದು, ಇದರಿಂದಾಗಿ ಸುಲಲಿತವಾಗಿ ಹಾಗೂ ಸೀಮಾತೀತವಾಗಿ ಅಂತರ್ಜಾಲ ಸಂಪರ್ಕವು ಲಭ್ಯವಿದೆ. |
| ಆ) | ಮುಗ್ಧ-ಪ್ರೌಢಾವಸ್ಥೆಯ ಮಕ್ಕಳ ಮನಸ್ಸನ್ನು ವಿಚಲಿತಗೊಳಿಸುವ, ಕಾನೂನುಬಾಹಿರ, ಅಶ್ಲೀಲ ಮಾಹಿತಿ, ದೃಶ್ಯ ಮಾಹಿತಿ ಸಿಗದಂತೆ ತಡೆಯುವ ನಿರ್ದಿಷ್ಟವಾದ ಕಠಿಣ ಕಾನೂನು ಇದೆಯೇ; ಅಂತಹ ಪೀಡಿತ ಯುವ ಜನಾಂಗದ ಅಂದಾಜು ಸಂಖ್ಯೆ ಎಷ್ಟು; | ಮುಗ್ಧ ಯುವಜನತೆಯ ಮನಸ್ಸುಗಳನ್ನು ವಿಚಲಿತಗೊಳಿಸಬಹುದಾದ ಯಾವುದೇ ಮಾಹಿತಿಗೆ ಹೊಕ್ಕುವುದನ್ನು ತಡೆಗಟ್ಟಲು ಅಂತರ್ಜಾಲ ಸೇವಾದಾರರುಗಳು ಹಾಗೂ ಟೆಲಿಕಾಂ ಕಂಪನಿಗಳಿಗೆ ಸರ್ಕಾರದಿಂದ ನಿರ್ದೇಶನ ನೀಡಲು ಮಾಹಿತಿ ತಂತ್ರಜ್ಞಾನ ಅಧಿನಿಯಮದ ಕಲಂ 69ಎ ಮತ್ತು 69ಬಿ ರಡಿಯಲ್ಲಿ ಅವಕಾಶವಿದೆ. ಅಂತರ್ಜಾಲದಲ್ಲಿರುವ ವಿಚಲಿತಗೊಳಿಸುವ ಮಾಹಿತಿಗೆ ಅವಕಾಶ ಪಡೆಯುವ ಇಡೀ ರಾಜ್ಯದ ಯುವಜನತೆಯ ಅಂದಾಜು ಸಂಖ್ಯೆಯನ್ನು ಪತ್ತೆಹಚ್ಚಲು ಕಷ್ಟಸಾಧ್ಯವಾಗಿರುತ್ತದೆ. |
| ಇ) | ಮಾರಕವಾದ, ಅಪರಾಧ ಮನೋಭಾವ ಕೆರಳಿಸಿ ದುಷ್ಕೃತ್ಯ ನಡೆಸಲು ಪ್ರೇರೇಪಿಸುವಂತಹ ಮಾಹಿತಿಗಳನ್ನು ತಡೆಯಲು ಕ್ರಮಗಳೇನು; | ಅಂತರ್ಜಾಲದಲ್ಲಿರುವ ವಿಚಲಿತಗೊಳಿಸುವ ಮಾಹಿತಿಗೆ ಪ್ರವೇಶಾವಕಾಶವನ್ನು ತಡೆಗಟ್ಟಲು ಟೆಲಿಕಾಂ ಕಂಪನಿಗಳಿಗೆ ಹಾಗೂ ಅಂತರ್ಜಾಲ ಸೇವಾದಾರರುಗಳಿಗೆ ನಿರ್ದೇಶನ ನೀಡಲು ಮಾಹಿತಿ ತಂತ್ರಜ್ಞಾನ ಅಧಿನಿಮಯದಡಿ ಕೇಂದ್ರ ಸರ್ಕಾರಕ್ಕೆ ಎಲ್ಲ ರೀತಿಯ ಅಧಿಕಾರವಿದೆ. |
| ಈ) | ವೈಜ್ಞಾನಿಕ ಮನೋಭಾವ ವೃದ್ಧಿಸಲು ಪೂರಕವಾಗಿ "ತಾರಾಲಯ" (Planetarium) ಜೊತೆಗೆ ಅಗತ್ಯವಾದ ಸಭಾಂಗಣ, ಸಂಗ್ರಹಾಲಯ ನಿರ್ಮಿಸಲಾಗಿದೆಯೇ? (ವಿವರ ನೀಡುವುದು) | ವೈಜ್ಞಾನಿಕ ಮನೋಭಾವ ವೃದ್ಧಿಸಲು ರಾಜ್ಯದಲ್ಲಿ 3 ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಹಾಗೂ 22 ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ. ಅವುಗಳಲ್ಲಿ, 2 ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಹಾಗೂ ಇತರೆಡೆ 4 ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಉಳಿದ ಕೇಂದ್ರಗಳ ಸ್ಥಾಪನೆ ವಿವಿಧ ಹಂತದಲ್ಲಿರುತ್ತವೆ. ರಾಜ್ಯದಲ್ಲಿ ಈಗಾಗಲೇ ಬೆಂಗಳೂರು ಮತ್ತು ಮಂಗಳೂರಿನಲ್ಲಿ ತಾರಾಲಯಗಳನ್ನು ಸ್ಥಾಪಿಸಲಾಗಿದ್ದು, ಇತರೆ ಜಿಲ್ಲಾ ಕೇಂದ್ರಗಳಾದ ಧಾರವಾಡ, ಬಾಗಲಕೋಟೆ, ವಿಜಯಪುರ, ಗದಗ, ಶಿವಮೊಗ್ಗ ಮತ್ತು ರಾಯಚೂರುಗಳಲ್ಲಿ ತಾರಾಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ತಾರಾಲಯಗಳ ಜೊತೆಗೆ ವೈಜ್ಞಾನಿಕ ಮನೋಭಾವ ವೃದ್ಧಿಸಲು ಪೂರಕವಾಗಿ ಅಗತ್ಯವಾದ ಸಭಾಂಗಣ ಮತ್ತು ಸಂಗ್ರಹಾಲಯಗಳನ್ನು ನಿರ್ಮಿಸಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ. |

ಕಡತ ಸಂಖ್ಯೆ: ಡಿಎಸ್‌ಟಿ 275 ಎಸ್‌ಟಿಎಸ್ 2018

(ಕೆ.ಜೆ. ಜಾರ್ಜ್)
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು